ದಿನಾಂಕಃ 03-08-2017 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು. –

ಪಾಟೀಸವಾಲು – ಶ್ರೀ. ಆರ್ ಆರ್ ವಕೀಲರಿಂದ ಪ್ರತಿವಾದಿ 3 ರಿಂದ 5 ಅವರ ಪರವಾಗಿ ಃ-

1. ನನಗೆ ಓದಲು ಬರೆಯಲು ಬರುತ್ತದೆ. ನಿವೇಶನ ಸಂಃ 22 ನ್ನು 3ನೇ ಪ್ರತಿವಾದಿ ದಿನಾಂಕ ಃ 12-7-1978 ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ನಿಜ. ಅದೇ ರೀತಿ ದಿ ಃ 2-9-81 ರಂದು ಅವರು ಬಿ ಶೆಡ್ಯೂಲ್ 8ನೇ ದಾವಾ ಮನೆ ಸಂಖ್ಯೆಃ 80 ನ್ನು ಖರೀದಿ ಮಾಡಿದ್ದಾರೆಯೇ ಎಂದರೆ ನಿಜ, ಅವರು ಒಬ್ಬರೇ ಮಾಡಿಲ್ಲ ಎಲ್ಲರೂ ಸೇರಿ ಮಾಡಿದ್ದೇವೆ. ನಾನು ಹೇಳಿದಂತೆ ಬಿ ಶೆಡ್ಯೂಲನ ಮನೆ ಸಂಃ 7 ರಿಂದ 9 ನ್ನು ನಮ್ಮ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿಲ್ಲ ಮತ್ತು ಅದು 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು. ಅವುಗಳನ್ನು ಒಟ್ಟು

ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದೇವೆ ಅಂತಾ ಏನೂ ದಾಖಲೆ ಹಾಜರು ಮಾಡಿದ್ದೀರಿ ಎಂದರೆ ಅದನ್ನು ತೋರಿಸಲು ಏನು ದಾಖಲೆ ಬರುತ್ತವೆ ಎನ್ನುತ್ತಾರೆ. ಬಿ ಶೆಡ್ಯೂಲನ 6ನೇ ಸ್ವತ್ತು ಈಗ ಯಾರ ಹೆಸರಿನಲ್ಲಿದೆ ನೋಡಿದ್ದೇನೆ. ಅದು 3ನೇ ಪ್ರತಿವಾದಿಯ ಹೆಸರಿನಲ್ಲಿದೆ. ನಾಗೇಶ ಎನ್ ಕೆ ಅಂದರೆ ನನ್ನ ಅಣ್ಣನ ಮಗನಾಗಬೇಕು. ಸದರಿ ಬಿ ಶೆಡ್ಯೂಲನ 6ನೇ ಸ್ವತ್ತು ಸದರಿ ನಾಗೇಶ ಹೆಸರಿನಲ್ಲದೆ ಎಂದರೆ ನಿಜ. ಅದು ಯಾವ ವರ್ಷ ಅವನ ಹೆಸರಿಗಾಯಿತು ನೆನಪಿಲ್ಲ. ಅದರ ಪೂರ್ವದಲ್ಲಿ ಆ ಮನೆ ಸಿದ್ದಾಪುರೆ ಅವರ ಹೆಸರಿನಲ್ಲಿತ್ತು, ಅವರಿಂದ ಅದನ್ನು ಖರೀದಿಸಲಾಗಿತ್ತು. ಅದನ್ನು ನಾಗೇಶ ಅವರ ಹೆಸರಿಗೆ ನೇರವಾಗಿ ಖರೀದಿಸಲಾಗಿತ್ತು ಸರಿಯಾಗಿ ನೆನಪಿಲ್ಲ. ಸದರಿ ಆಸ್ತಿ ಖರೀದಿ ಮಾಡುವ ಪೂರ್ವದಲ್ಲೇ ನಾವು ಭಾಗ ಆಗಿದ್ದರಿಂದ ಅದು ಯಾರ ಹೆಸರಿಗೆ ಖರೀದಿಸಲಾಗಿತ್ತು ಅಂತಾ ನನಗೆ ನಿಖರವಾಗಿ ನೆನಪಿಲ್ಲ ಎಂದರೆ ಸುಳ್ಳು. ಬಿ ಶೆಡ್ಯೂಲನ 5ನೇ ಸ್ವತ್ತು ಸಹ 3ನೇ ಪ್ರತಿವಾದಿಯ ಹೆಸರಿನಲ್ಲಿದೆ. ಅದನ್ನು ನಮ್ಮ ತಂದೆ ಖರೀದಿ ಮಾಡಿ ಅವರ ಹೆಸರಿಗೆ ಮಾಡಿಸಿದರು. ಅದರ ಖರೀದಿ ಪತ್ರದಲ್ಲಿ ನಮ್ಮ ತಂದೆ ಖರೀದಿ ಮಾಡಿದ ಬಗ್ಗೆ ನಮೂದಿಸಿಲ್ಲ. ಬಿ ಶೆಡ್ಯೂಲನ 3ನೇ ದಾವಾ ನಿವೇಶನ ಈಗ ನನ್ನ ಹೆಸರಿಗೆ ಇದೆ.

2. 1995 ರಲ್ಲಿ ನನ್ನ ತಂದೆ ತೀರಿಕೊಂಡ ಮೇಲೆ ಅದನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ. ಅದು ನೇರವಾಗಿ ನನ್ನ ಹೆಸರಿಗೆ ಬಂತು. ಎಲ್ಲರೂ ಒಪ್ಪಿ ಮಾಡಿದ್ದಾರೆ ಅಂತಾ ತೋರಿಸಲು ದಾಖಲೆ ಹಾಕಿದ್ದೆ. ಬಿ ಶೆಡ್ಯೂಲನ 2 ನೇ ದಾವಾ ಆಸ್ತಿ ಈಗ 2ನೇ ಪ್ರತಿವಾದಿಯ ಗಂಡ ತಿಪ್ಪೇರುದ್ರಪ್ಪ ಹೆಸರಿನಲ್ಲಿದೆ. ಅದು ಯಾವ ವರ್ಷ ಅವರ ಹೆಸರಿಗೆ ಆಯಿತು ನೆನಪಿಲ್ಲ. ಯಾವ ಆಧಾರಕ್ಕೆ ಮಾಡಿಸಿದರು ಎಂದರೆ ಅವರ ಹೆಸರಿಗೆ ಮನೆ ಇರಲಿಲ್ಲ, ಆದ್ದರಿಂದ ಎಲ್ಲಾ ಅಣ್ಣ-ತಮ್ಮಂದಿರ ಒಪ್ಪಿಗೆಯಿಂದ ಮಾಡಿಸಿದರು. ಅದನ್ನು ಬರವಣಿಗೆಯ ಒಪ್ಪಿಗೆಯಿಂದ ಮಾಡಿಸಲಿಲ್ಲ. ಕೆಲವು ಮನೆ ಮತ್ತು ಸರ್ವೆ ನಂಬರಗಳನ್ನು ಒಪ್ಪಿಗೆಯಿಂದ

ಹೆಸರಿಗೆ ಮಾಡಿಸುವಾಗ ಕಂದಾಯ ಅಧಿಕಾರಿಗಳ ಮುಂದೆ ಮಾಡಿಸಿಲ್ಲ. ನಮ್ಮ ಮದ್ಯೆ ಮಾತ್ರ ಮಾಡಿಕೊಡಿದ್ದೇವೆ. ಅದೇ ರೀತಿ ಬಿ ಶೆಡ್ಯೂಲನ 1ನೇ ಮನೆಗಳನ್ನು ಗ್ರಾಮ ಪಂಚಾಯ್ತಿಯ ಅಧಿಕಾರಿಯ ಮುಂದೆ ಎಲ್ಲರ ಒಪ್ಪಿಗೆಯಿಂದ ಸಹಿ ಮಾಡಿಲ್ಲ ಎಂದರೆ ಸುಳ್ಳು. ಅದರ ಬಗ್ಗೆ ಖಾತಾ ನಕಲನುಗಳನ್ನು ಹಾಜರು ಮಾಡಿದ್ದೇನೆ. ಸರ್ವೆ ನಂಬರಗಳ ಹಕ್ಕು ಬದಲಾವಣೆ ಮಾಡುವಾಗ ಫಾರ್ಮ ನಂ. 21 ಕೊಡುತ್ತಾರೆಯೇ ಎಂದರೆ ನಿಜ. ಆ ರೀತಿ ಕೊಟ್ಟಾಗ ಎಲ್ಲಾ ಅಣ್ಣ-ತಮ್ಮಂದಿರು ಸಹಿ ಮಾಡಿದ್ದೇವೆ. ಆ ರೀತಿ ನಮ್ಮೆಲ್ಲರ ಹೆಸರಿಗೆ ಫಾರ್ಮ ನಂ. 21 ಪ್ರಚಾರಗೊಂಡಾಗ ನಾನು ತಕರಾರು ಮಾಡಿಲ್ಲ. ಆದ್ದರಿಂದ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳು ನನ್ನ ತಕರಾರು ಇಲ್ಲದ ಕಾರಣ ಅವರವರ ಹೆಸರಿಗೆ ಆಗಿವೆ ಎಂದರೆ ಸುಳ್ಳು.

3. 3ನೇ ಪ್ರತಿವಾದಿ ಬಿ ಶೆಡ್ಯೂಲನ 9ನೇ ಸ್ವತ್ತುಗಳನ್ನು ಪ್ರತಿವಾದಿ 4 ಮತ್ತು 5 ರವರಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆಯೇ ಎಂದರೆ ಗೊತ್ತಿಲ್ಲ. ಸದರಿ ವಿಷಯ ನನಗೆ ಮೇ-2015 ರಲ್ಲಿ ಗೊತ್ತಾಯಿತು. ನಾನು ಹಕ್ಕು ಬದಲಾವಣೆಗೆ ಮತ್ತು ದಾನಪತ್ರಕ್ಕೆ ಯಾವುದೇ ತಕರಾರು ಮಾಡಿಲ್ಲ ಎಂದರೆ ಸುಳ್ಳು. ಅವುಗಳನ್ನು ಪ್ರಶ್ನಿಸಿ ಯಾವುದೇ ನೋಟೀಸು ಕೊಟ್ಟಿಲ್ಲ, ದಾವೆ ಹಾಕಿದ್ದೇನೆ. ಸದರಿ ಆಸ್ತಿಯನ್ನು 3ನೇ ಪ್ರತಿವಾದಿ ಬ್ಯಾಂಕುಗಳಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದರೆ ನಿಜ. ಖರೀದಿ ಮಾಡಿದಾಗಿನಿಂದ ಅವುಗಳ ಬಾಡಿಗೆಯನ್ನು ಅವರೇ ಪಡೆಯುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಬಾಡಿಗೆ ಅವರೊಬ್ಬರೇ ಪಡೆಯುತ್ತಿದ್ದಾರೆ ಅಂತಾ ನಾನು ತಕರಾರು ಮಾಡಿಲ್ಲ ಎಂದರೆ ಸುಳ್ಳು. ಹಾಗಂತ ನೋಟಿಸ್ ಕೊಟ್ಟಿಲ್ಲ. ಎ ಶೆಡ್ಯೂಲ್ ಸರ್ವೆ ನಂ. 1140 ರ ಒಟ್ಟು ವಿಸ್ತೀರ್ಣ ಎಂದರೆ ನೆನಪಿಲ್ಲ. ಅದನ್ನು ನನ್ನ ತಂದೆಯೇ ನಮ್ಮ ಕುಟುಂಬದ ಪರವಾಗಿ ಖರೀದಿ ಮಾಡಿದ್ದಾರೆ. ಎಷ್ಟು ಎಕರೆ ಖರೀದಿ ಮಾಡಿದರು ನೆನಪಿಲ್ಲ. ಸದರಿ ಆಸ್ತಿಯಲ್ಲಿ ನನ್ನ ತಂದೆ 6 ಎಕರೆ 64 ಸೆಂಟ್ಸ ಖರೀದಿ ಮಾಡಿಲ್ಲ ಎಂದರೆ ಸುಳ್ಳು. ಸದರಿ ಆಸ್ತಿಯ ಪಹಣಿ ಈಗಲೂ ಒಬ್ಬ ಕೊಡದಪ್ಪ ಅವರ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ. ಎ ಶೆಡ್ಯೂಲನ 16ನೇ

ಜಮೀನನ್ನು 3ನೇ ಪ್ರತಿವಾದಿ ಖರೀದಿ ಮಾಡಿದ್ದರು ಎಂದರೆ ನಮ್ಮ ತಂದೆ ಮಾಡಿದ್ದರು. ನಮ್ಮ ತಂದೆ ಆ ರೀತಿ ಖರೀದಿ ಮಾಡಿದ ಬಗ್ಗೆ ನಮ್ಮ ಕುಟುಂಬದ ಯಾವುದೇ ಬರವಣಿಗೆ ಇಲ್ಲ. 3ನೇ ಪ್ರತಿವಾದಿ 1977 ರಿಂದ ಕ್ಲಿನಿಕ್ ನಡೆಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಸುಮಾರು 35 ವರ್ಷದಿಂದ ಅವರು ಎಲ್‌ಐಸಿ ಏಜೆಂಟ್ ಆಗಿ ಕೆಲಸ ಮಾಡುತ್ತಾರೆ ಎಂದರೆ ಇರಬಹುದು. ಅವರಿಗೆ ಶತಕವೀರ ಅಂತಾ ಎಲ್‌ಐಸಿ ಅವರು ಪ್ರಶಸ್ತಿ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಅದೇರೀತಿ 1984 ರಿಂದ 2012ರ ವರೆಗೆ ಅವರು ಪಾವನ್ ಬ್ರೋಕರ್ ಲೈಸನ್ಸ ಪಡೆದು ಲೇವಾದೇವಿ ಮಾಡುತ್ತಿದ್ದರು ಎಂದರೆ ಇರಬಹುದು. 1994 ರಲ್ಲಿ 3ನೇ ಪ್ರತಿವಾದಿಯ ಮನೆಗೆ ಆದಾಯ ತೆರಿಗೆಯವರು ದಾಳಿ ಮಾಡಿದರು ಎಂದರೆ ನಿಜ. ಆ ದಾವೆಯಲ್ಲಿ ಅವರ ಮನೆಯಲ್ಲಿದ್ದ ಬಂಗಾರ ಬೆಳ್ಳಿ ಮತ್ತು ಎಲ್ಲಾ ದಾಖಲೆಗಳನ್ನು ಅವರು ತೆಗೆದುಕೊಂಡು ಹೋದರು ಎಂದರೆ ಗೊತ್ತಿಲ್ಲ. ಈಗಲೂ ಸಹ ಆದಾಯ ತೆರಿಗೆ ಕೇಸು ಅವರ ಮೇಲೆ ನಡೆಯುತ್ತಿದೆ ಎಂದರೆ ಸುಳ್ಳು.

4. ನನ್ನ ತಂದೆ ಬಟ್ಟೆ ಅಂಗಡಿ ವ್ಯಾಪಾರ ಮಾಡುತ್ತಿದ್ದರು. ಅಂಗಡಿಯ ಹೆಸರು ಕೆ ಭೀಮಪ್ಪ ಅಂಡ್ ಸನ್ಸ ಅಂತಾ ಇತ್ತು. ಅದರ ಪರವಾನಿಗೆ ಇದೆ, ಹಾಜರು ಮಾಡಿದ್ದೇನೆ. ನಮ್ಮ ತಂದೆ ಆದಾಯ ತೆರಿಗೆ ಕಟ್ಟುತ್ತಿದ್ದರಾ? ಎಂದರೆ ಅದನ್ನೆಲ್ಲಾ 3ನೇ ಪ್ರತಿವಾದಿಯೇ ನೋಡುತ್ತಿದ್ದ. ಸದರಿ ವ್ಯವಹಾರವನ್ನು ನಮ್ಮ ತಂದೆ ಜೀವಂತ ಇರುವವರೆಗೆ ಮಾಡಿದ್ದಾರೆ. 3ನೇ ಪ್ರತಿವಾದಿ 1ನೇ ತರಗತಿಯಿಂದ ಡಾಕ್ಟರ್ ಆಗುವವರೆಗೆ ಓದಲು ಹೋಗಿದ್ದರು ಎಂದರೆ ನಿಜ. ಆಗ ನಾನೇ ಹಿರಿಯ ಎಂದರೆ ಸುಳ್ಳು, ನಮ್ಮ ತಂದೆ ಹಿರಿಯರಾಗಿದ್ದರು. ಅವರ ನಂತರ 1ನೇ ಪ್ರತಿವಾದಿ ಹಿರಿಯಣ್ಣನಾಗಿದ್ದರು. ಸದರಿ ಅಂಗಡಿಗೆ ಸಂಬಂಧಪಟ್ಟ ಬಟ್ಟೆಗಳನ್ನು 3ನೇ ಪ್ರತಿವಾದಿ ಸಹಿ ಮಾಡಿ ತರಿಸುತ್ತಿದ್ದ. ಅದನ್ನು ತೋರಿಸಲು ದಾಖಲೆ ಹಾಕಿದ್ದೀರಾ ಎಂದರೆ ನೆನಪಿಲ್ಲ. ಈಗ ಬಟ್ಟೆ ಅಂಗಡಿಯನ್ನು ನಮ್ಮ ಮಗ ರಾಘವೆಂದ್ರ ನಡೆಸುತ್ತಾನೆ. ಆ ಅಂಗಡಿ ನನ್ನ ಮಗ ರಾಘವೆಂದ್ರನ ಹೆಸರಿಗೆ ಇದೆ. ನನ್ನ ತಂದೆ ತೀರಿದ ನಂತರ ಆ ಅಂಗಡಿಯನ್ನು 2ನೇ ಪ್ರತಿವಾದಿ ಗಂಡನ ಹೆಸರಿಗೆ ನಂತರ ನನ್ನ ಮಗನ ಹೆಸರಿಗೆ ಮಾಡಿಸಲಾಯಿತು. ತಿಪ್ಪೇರುದ್ರಪ್ಪ ಅವರ ಹೆಸರಿಗೆ

ಮಾಡಿಸುವಾಗ ನನ್ನ ತಂದೆಯ ಮರಣ ಪ್ರಮಾಣ ಪತ್ರ ಕೊಡಲಾಗಿತ್ತು. ನನ್ನ ಮಗನ ಹೆಸರಿಗೆ ಮಾಡಿಸುವಾಗ ಸಹ ಮರಣ ಪ್ರಮಾಣ ಪತ್ರ ಕೊಡಲಾಗಿತ್ತು. ಸದರಿ ಅಂಗಡಿ ತಿಪ್ಪೇರುದ್ರಪ್ಪ ಅವರ ಹೆಂಡತಿ ಮಕ್ಕಳಿಗೆ ಹೋಗಬೇಕಾಗಿತ್ತು ಎಂದರೆ, ಅವರಿಗೆ ಮಕ್ಕಳು ಇರಲಿಲ್ಲ, ಅವರು ನನ್ನ ಮಗನನ್ನು ತಮ್ಮ ಮಗ ಅಂತಾ ಒಪ್ಪಿಕೊಂಡಿದ್ದರು. ಆ ವಿಷಯವನ್ನು ಹಕ್ಕು ಬದಲಾವಣೆಯಲ್ಲಿ ಬರೆಸಿದ್ದೀರಾ ಎಂದರೆ ನೆನಪಿಲ್ಲ. ಸದರಿ ಪ್ರಕ್ರಿಯೆಗೆ ಎಲ್ಲ ಸಹೋದರರ ಒಪ್ಪಿಗೆ ಇತ್ತು, ಅದನ್ನು ಲಿಖಿತ ರೂಪದಲ್ಲಿ ಪಡೆದಿಲ್ಲ.

5. ನಾನು ಸಿಮೆಂಟ್ ಅಂಗಡಿ ನಡೆಸುತ್ತಿದ್ದೆ ಎಂದರೆ ನಿಜ. ಅದನ್ನೂ ಸಹ ಕೆ ಭೀಮಪ್ಪ ಅಂಡ್ ಸನ್ಸ ಹೆಸರಿನಲ್ಲಿ ನಡೆಸುತ್ತಿದ್ದೆ. ಅದರ ಪರವಾನಿಗೆ ನನ್ನ ಮಗ ರಾಘವೆಂದ್ರನ ಹೆಸರಿಗಿದೆ. ಅದನ್ನು ಹಾಜರು ಮಾಡಿದ್ದೇನೆ. ಅದರ ಆದಾಯ ತೆರಿಗೆಯನ್ನು ಕೊಟ್ಟಿದ್ದೇವೆ. ಅದನ್ನು ಹಾಜರು ಮಾಡಿದ ಬಗ್ಗೆ ನೆನಪಿಲ್ಲ. ಅದರ ಆದಾಯ ವನ್ನು ನಾನು ಮತ್ತು ನನ್ನ ಮಗ ಬಳುತ್ತಿದ್ದೇವೆ ಎಂದರೆ ಸುಳ್ಳು. ಅದರಲ್ಲಿ ಬಂದ ಆದಾಯವನ್ನು ಎಲ್ಲಾ ಕುಟುಂಬದವರು ಹಂಚಿಕೊಳ್ಳುತ್ತೀರಾ ಎಂದರೆ ಹಂಚಿಕೊಳ್ಳುವ ಪ್ರಶ್ನೆ ಬರುವುದಿಲ್ಲ. 1983-84 ರಲ್ಲಿ ಭಾಗ ಆಗಿದ್ದರಿಂದ ನಾವು ಸ್ವತಂತ್ರವಾಗಿ ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಅನುಭವಿಸುತ್ತಿದ್ದೇವೆ ಎಂದರೆ ಸುಳ್ಳು. ಸಿಮೆಂಟ್ ಮತ್ತು ಬಟ್ಟೆ ಅಂಗಡಿಗಳಿಂದ ವರ್ಷಕ್ಕೆ ಎಷ್ಟು ಲಾಭ ಬರುತ್ತದೆ ಹೇಳಲು ಬರುವುದಿಲ್ಲ. ನಮ್ಮ ತಂದೆ ಅಂಗಡಿ ಆರಂಬಬಿಸಿದ ನಂತರ ನಾವು ತೆಗೆದುಕೊಳ್ಳುವವರೆಗೆ ಒಟ್ಟು ಎಷ್ಟು ಆದಾಯ ಬಂದಿತ್ತು ಎಂದರೆ 3ನೇ ಪ್ರತಿವಾದಿಗೆ ಗೊತ್ತು. 3ನೇ ಪ್ರತಿವಾದಿಗೆ ತನ್ನ ಆಸ್ತಿ ಬಿಟ್ಟು ಬೇರೆ ಗೊತ್ತಿಲ್ಲ ಎಂದರೆ ಸುಳ್ಳು. 3ನೇ ಪ್ರತಿವಾದಿಯನ್ನು ಹೊರತುಪಡಿಸಿ ನಾವು ಉಳಿದ ಅಣ್ಣ-ತಮ್ಮಂದಿರು ಮನೆಗಳ ಹಕ್ಕು ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಎಲ್ಲರು ಒಪ್ಪಿಕೊಂಡೆ ಮಾಡಿದ್ದೇವೆ. ಹಕ್ಕು ಬದಲಾವಣೆಯನ್ನು ನೋಡಿದ್ದೀರಾ ಎಂದರೆ ನೆನಪಿಲ್ಲ. ಯಾವ ವರ್ಷ ಮಾಡಿಸಿದ್ದೇವೆ ನೆನಪಿಲ್ಲ. 3ನೇ ಪ್ರತಿವಾದಿ ಯಾವುದೇ ಒಪ್ಪಿಗೆ ಕೊಟ್ಟಿಲ್ಲ ಎಂದರೆ ಅವರೇ ನಿಂತು ಮಾಡಿಸಿದ್ದಾರೆ.

6. 3ನೇ ಪ್ರತಿವಾದಿ ಸಿವಿಲ್ ನ್ಯಾಯಾಲಯ, ಕೂಡ್ಲಿಗಿಯಲ್ಲಿ ಓಎಸ್-91/15 ನ್ನು ಪಾಲು ವಿಭಾಗ ಕೋರಿ ಹಾಕಿದ್ದಾರೆ ಮತ್ತು ನಾನು ಅದರಲ್ಲಿ ಪ್ರತಿವಾದಿಯಾಗಿದ್ದೇನೆ ಎಂದರೆ ನಿಜ. ಅದರಲ್ಲಿ ಈಗಾಗಲೇ ಪಿತ್ರಾರ್ಜಿತ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದೇವೆ ಅಂತಾ ತಕರಾರು ಹಾಕಿದ್ದೇನೆ ಎಂದರೆ ಸುಳ್ಳು. ಆದಾಯ ತೆರಿಗೆ ದಾಳಿ ವೇಳೆ ನನ್ನ ಹೇಳಿಕೆ ಪಡೆದಿದ್ದಾರೆಯೇ ಪಡೆದಿರಬಹುದು. ಅಲ್ಲಿ ಏನು ಹೇಳಿಕೆ ಕೊಟ್ಟಿದ್ದೆ ನೆನಪಿಲ್ಲ. ಆದಾಯ ತೆರಿಗೆ ಇಲಾಖೆ ಮುಂದೆ ನಾವೆಲ್ಲರೂ ಈಗಾಗಲೇ ಭಾಗ ಆಗಿದ್ದೇವೆ ಅಂತಾ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸುಳ್ಳು. 2ನೇ ಪ್ರತಿವಾದಿ ಗಂಡ ಸಹ ತಮ್ಮ ಹೆಸರಿಗೆ ಕೆಲವು ಸ್ವಂತ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಅವನ್ನು ಸಹ ನಮ್ಮ ತಂದೆ ಖರೀದಿ ಮಾಡಿದ್ದಾರೆ. ಅಂತಹ ಆಸ್ತಿಗಳ ಲಾಭವನ್ನು ಅವರ ಕುಟುಂಬದವರೇ ಪಡೆಯುತ್ತಿದ್ದಾರೆ ಎಂದರೆ ಸುಳ್ಳು. ಅವರ ಮಗ ಸಹ ವ್ಯವಹಾರ ಮಾಡುತ್ತಾನೆ ಎಂದರೆ ಅವರಿಗೆ ಮಕ್ಕಳಿಲ್ಲ. ಎ ಶೆಡ್ಯೂಲನ 11 ರಿಂದ 13 ನೇ ಆಸ್ತಿಗಳು 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ಅದೇರೀತಿ ಬಿ ಶೆಡ್ಯೂಲನ 9ನೇ ಆಸ್ತಿ ಪ್ರತಿವಾದಿ 4 ಮತ್ತು 5 ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು. ನನ್ನ ಮಗನ ಹೆಸರಿಗೆ ಆಸ್ತಿ ಇದ್ದ ಕಾರಣ ಅವನು ಅವಶ್ಯಕ ಪಕ್ಷಗಾರ ಎಂದರೆ ಸರಿಯಲ್ಲ. ನಮ್ಮ ತಂದೆಯ ಆಸ್ತಿಗಳಿಗೆ ಮಾತ್ರ ಎಲ್ಲರ ಭಾಗ ಇದೆ ಮತ್ತು ಅವರವರು ಖರೀದಿ ಮಾಡಿದ ಆಸ್ತಿಗಳಲ್ಲಿ ಭಾಗ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಇದ್ದಾಗಲೇ ಎಲ್ಲರೂ ಬೇರೆ ಬೇರೆ ಮನೆ ಮಾಡಿ ಸ್ವತಂತ್ರವಾಗಿ ವಾಸ ಇದ್ದೇವು ಎಂದರೆ ಅಡುಗೆ ಮಾತ್ರ ಬೇರೆ ಬೇರೆ ಮಾಡುತ್ತಿದ್ದೇವು. ಯಾವುದೇ ಜಂಟಿ ಒಟ್ಟು ಕುಟುಂಬ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಆಸ್ತಿಯಲ್ಲಿ ಯಾವುದೇ ಭಾಗ ಕೇಳಲು ನನಗೆ ಹಕ್ಕು ಇಲ್ಲ ಎಂದರೆ ಸುಳ್ಳು.

ಮರುವಿಚಾರಣೆ : ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿ.ಸಿ.ಜೆ. ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.